**ದಿನಾಂಕಃ 22-09-2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎನ್ ಎಸ್ ಬಿ ವಕೀಲರಿಂದಃ**

3. ಈ ಪ್ರಕರಣದಲ್ಲಿ ಅರ್ಜಿದಾರನ ವಿರುದ್ಧ ಇಲಾಖಾ ವಿಚಾರಣೆ ನಡೆಸಿದ ವಿಚಾರಣಾಧಿಕಾರಿ ನಾನು ಅಲ್ಲ ಎಂದರೆ ಹೌದು . ವಿಚಾರಣಾಧಿಕಾರಿ ಈಗ ಸೇವೆಯಲ್ಲಿ ಇಲ್ಲ ಅವರು ರಾಜಿನಾಮೆ ನೀಡಿ ನಿವೃತ್ತಿ ಹೊಂದಿದ್ದಾರೆ . ಅವರಿಗೆ ಈ ಪ್ರಕರಣದಲ್ಲಿ ಸಾಕ್ಷ್ಯ ನೀಡುವಂತೆ ನಮ್ಮ ಇಲಾಖೆಯಿಂದ ತಿಳಿಸಿದೆವು . ಅವರು ಮೌಖಿಕವಾಗಿ ಬರಲು ಆಗುವುದಿಲ್ಲ ಎಂದು ತಿಳಿಸಿರುತ್ತಾರೆ. ಅವರು ಯಾವ ರೀತಿ ವಿಚಾರಣೆ ಮಾಡಿದ್ದಾರೆ ಎಂದು ನನಗೆ ಪ್ರತ್ಯಕ್ಷ ಮಾಹಿತಿ ಇಲ್ಲ ಆದರೆ ದಾಖಲಾತಿ ಆಧಾರದ ಮೇಲೆ ಮಾಹಿತಿ ಇದೆ . ಆ ದಾಖಲಾತಿಯ ಕಡತವನ್ನು ನಮ್ಮ ಕಚೇರಿಯಲ್ಲಿ ಆಡಳಿತಾಧಿಕಾರಿ ನಿರ್ವಹಿಸುತ್ತಾರೆ. ನನಗೆ ಸಾಕ್ಷ್ಯ ನೀಡಲು ವಿಭಾಗೀಯ ನಿಯಂತ್ರಣಾಧಿಕಾರಿ ಅಧಿಕಾರ ನೀಡಿದ್ದಾರೆ. ಅದನ್ನು ಹಾಜರುಪಡಿಸಿದ್ದೇನೆ. ವಿಚಾರಣಾಧಿಕಾರಿ ಅರ್ಜಿದಾರನಿಗೆ ವಿಚಾರಣೆ ಕಾಲದಲ್ಲಿ ತನ್ನ ಆಹ್ವಾಲನ್ನು ಹೇಳಿಕೊಳ್ಳಲು ಸರಿಯಾದ ಅವಕಾಶವನ್ನೇ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಿಚಾರಣೆಗೆ ಹಾಜರಾಗಲು ಅರ್ಜಿದಾರನಿಗೆ ಆ ವಿಚಾರಣೆಯಲ್ಲಿ ತಿಳುವಳಿಕೆ ಪತ್ರವನ್ನೇ ನೀಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನ ವಿರುದ್ಧ ಯಾವುದೇ ನಿರ್ದಿಷ್ಟ ದೋಷಾರೋಪಣೆ ಹೊರಿಸಲು ಅವರು ವಿಫಲರಾಗಿದ್ದಾರೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ರಕ್ಷಣಾ ಹೇಳಿಕೆ ನೀಡಲು ಸಹ ಅವಕಾಶ ನೀಡಿಲ್ಲ ಎಂದರೆ ಸರಿಯಲ್ಲ. ಅವರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ವಿಚಾರಣಾಧಿಕಾರಿ ಕಡತಕ್ಕೆ ಅಳವಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ವಿಚಾರಣೆಯನ್ನು ಕಾಯ್ದೆಯಂತೆ ಮತ್ತು ನೈಸರ್ಗಿಕ ಕಾನೂನಿನಂತೆ ನಡೆಸಿಲ್ಲ ಎಂದರೆ ಸರಿಯಲ್ಲ. ವಿಚಾರಣಾಧಿಕಾರಿ ಸಿ ಆ್ಯಂಡ್ ಡಿ ನಿಯಮಾವಳಿ ಪ್ರಕಾರ ಇಲಾಖಾ ವಿಚಾರಣೆ ನಡೆಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನ ವಿರುದ್ಧ ವಿಚಾರಣಾಧಿಕಾರಿ ಪಕ್ಷಪಾತ ತೋರಿಸಿದ್ದಾರೆ ಎಂದರೆ ಸರಿಯಲ್ಲ. ವಿಚಾರಣಾಧಿಕಾರಿ ನಮ್ಮ ಸಂಸ್ಥೆಯ ನೌಕರ ಆಗಿದ್ದರು ಎಂದರೆ ಹೌದು . ವಿಚಾರಣಾಧಿಕಾರಿಯನ್ನು ನ್ಯಾಯಾಲಯಕ್ಕೆ ಸಾಕ್ಷಿಯನ್ನಾಗಿ ಕರೆಸಿದರೆ ಲೋಪದೋಷ ಹೊರಬರುತ್ತದೆ ಎಂದು ಅವರನ್ನು ಸಾಕ್ಷಿಯನ್ನಾಗಿ ಕರೆಸಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ ಮತ್ತು ಅಧಿಕಾರ ಇಲ್ಲ

ಎಂದರೆ ಸರಿಯಲ್ಲ. ಇಲಾಖಾ ಅಧಿಕಾರಿಗಳ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.